ಕಾಣವಾದರೆ ನಮ್ಮ ಸಹೋದರರಿಗೆ ನಾವಾಗಿಯೇ ತೊಂದರೆ ಮಾಡಿದಂತಾಗುತ್ತದೆ. ರಾಜ್ಯದ ಹಿತದೃಷ್ಟಿಯಿಂದ ಅಲ್ಲಿ ನಮ್ಮ ಸಹೋದರರು ಅಲ್ಲ ಯಾರಿದ್ದಾರೆ, ಅವರ ಹಿತದೃಷ್ಟಿಯಿಂದ ಆ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುವುದು ಬೇಡ ಎಂಬ ತೀರ್ಮಾನವನ್ನು ತೆಗೆದುಕೊಂಡಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಲ್ಲಿನ ಕಾನೂನು ಮತ್ತು ಸುವ್ಯವಸ್ಥೆಯ ವಿಚಾರವಾಗಿ....

ಅಧ್ಯಕ್ಷರು : ತಾವು ಎಲ್ಲರ ಪರವಾಗಿ ಹೇಳಲು ಬರುವುದಿಲ್ಲ, ಯಾರ್ಯಾರು ಹೇಗೆ ಮಾತನಾಡುತ್ತಾರೆ ಎಂಬುದನ್ನು ನನಗೆ ಹೇಳಿ ಮಾತನಾಡುತ್ತಾರೋ? ಆದ್ದರಿಂದ ಆ ಚರ್ಚೆ ಈಗ ಬೇಡ.

Reg: State Govt's stand on TADA.

Srio Quamural Islam : A News has appeared in aurdu paper on a front page that the Govt of Karnataka is recommending to the central Govt. to Continue TADA.

Mr. Sreaker : The Home Minister has told me that it is a false niws and the state Govt has no such proposal.

ಪ್ರಕಟಣೆಗಳು

Sri Quamural Islam : It has appeared in the news paper and there fore, I wanted to know the correct position.

Mr. Speaker : They will take the necessary steps to clarify .

ಅಧ್ಯಕ್ಷರು ; ಮಾನ್ಯ ಸಭಾಪತಿಯವರಿಂದ ಈ ಕೆಳಗಿನ ಸಂದೇಶಗಳು ಬಂದಿರುತ್ತವೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ, ಹಾಗೂ ನಡೆವಳಿಕೆ ನಿಯಮ 114ರ ಮೇರೆಗೆ 19-4-1995 ರಂದು 1995 ನೇ ಸಾಲಿನ ಕರ್ನಾಟಕ ರಾಜ್ಯ ಮಹಿಳಾ ಅಯೋಗ ವಿಧೇಯಕವನ್ನು ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1995-96ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ವಿವಿಧ ಸಮಿತಿಗಳ ಸದಸ್ಯ ಸ್ಥಾನಕ್ಕೆ ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗೆ ಸಮಾನವಾಗಿ ನಾಮಪತ್ರಗಳು ಬಂದಿರುವುದರಿಂದ ವಿಧಾನ ಸಭೆಯಿಂದ ವಿವಿಧ ಸಮಿತಿಗಳಿಗೆ ಈ ಕೆಳಗೆ ಸೂಚಿಸಿರುವ ಸದಸ್ಯರುಗಳು ಚುನಾಯಿತರಾಗಿರುತ್ತಾರೆಂದು ಘೋಷಿಸುತ್ತೇನೆ.

ಸಭಾಧ್ಯಕ್ಷರ ಪ್ರಕಟಣೆಗಳು

1. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ

ಶ್ರೀಯುತರುಗಳಾದ:

1. ಸಿ.ಎಸ್. ಪುಟ್ಟೇಗೌಡ
2. ಎಸ್.ಕೃಷ್ಣಪ್ಪ
3. ಕೆ.ಎನ್. ನಾಗೇಗೌಡ
4. ಮಾಮನಿ ಚಂದ್ರಶೇಖರ ಮಲ್ಲಿಕಾರ್ಜುನ